# ಜಯ-ಅಪಜಯ

ಅಂತರ್ ಮಾರ್ಗದರ್ಶಕನ ಮೂಲಕ ಜೀವಿಸುವವನು ಸದಾ ಜಯವನ್ನೇ ಸಾಧಿಸುತ್ತಾನೆಯೇ ಎನ್ನುವ ಸಂಶಯ ನಿಮ್ಮಲ್ಲಿ ಮೂಡಬಹುದು. ಅವನು ಸದಾ ಜಯವನ್ನು ಸಾಧಿಸುವುದಿಲ್ಲ, ಅವನು ಜಯವನ್ನು ಸಾಧಿಸಿದರೂ, ಅಪಜಯವನ್ನು ಸಾಧಿಸಿದರೂ, ಸದಾ ಆನಂದದಿಂದ ಇರುತ್ತಾನೆ. ಹಾಗೆಯೇ ಅಂತರ್ ಮಾರ್ಗದರ್ಶಕತ್ವದಲ್ಲಿ ಜೀವಿಸದಿರುವವನು ಜಯವನ್ನು ಸಾಧಿಸಿದರೂ ಸಹ ಸದಾ ಆನಂದದಿಂದ ಇರಲು ಸಾಧ್ಯವಿಲ್ಲ.

ಇಲ್ಲಿ ಜಯವೆನ್ನುವುದು ನಿರ್ಧರಿಸುವ ಪ್ರಮಾಣ ಅಲ್ಲ. ಏಕೆಂದರೆ ಜಯವೆನ್ನುವುದು ಅನೇಕ ವಿಷಯಗಳ ಮೇಲೆ ಅವಲಂಭಿಸಿರುತ್ತದೆ. ಇಲ್ಲಿ ಆನಂದವಾಗಿ ಇರಬೇಕೆನ್ನುವುದೇ ನಿರ್ಧರಿಸುವ ಪ್ರಮಾಣ. ಏಕೆಂದರೆ ಆನಂದವೆನ್ನುವುದು ಕೇವಲ ನಿಮ್ಮ ಮೇಲೆ ಆಧಾರಪಟ್ಟಿರುತ್ತದೆ. ಇತರರು ನಿಮ್ಮ ಸ್ಪರ್ಧಿಗಳಾಗಿರುವುದರಿಂದ ನೀವು ಅಪಜಯವನ್ನು ಹೊಂದಿರಬಹುದು. ನೀವು ಅಂತರ್ ಮಾರ್ಗದರ್ಶಕತ್ವದ ಜೊತೆ ಕಾರ್ಯ ನಿರ್ವಹಿಸುತ್ತಾ ಇರುತ್ತೀರಿ, ಆದರೆ ನಿಮ್ಮ ಸುತ್ತಲೂ ಇರುವವರು ಬುದ್ದಿವಂತಿಕೆಯಿಂದ, ಮೋಸತನದಿಂದ, ತಮ್ಮ ತಮ್ಮ ಯೋಜನೆಯ ಅನುಗುಣವಾಗಿ, ಕಪಟತನದಿಂದ, ದೌರ್ಜನ್ಯದಿಂದ ಕಾರ್ಯನಿರ್ವಹಿಸುತ್ತಾ ಇರಬಹುದು.

ಹಾಗೆಯೇ ನೀವು ಹುಟ್ಟುವಾಗಲೇ ವಿಧಿಲಿಖಿತವನ್ನು ಬರೆದುಕೊಂಡು ಬರುತ್ತೀರಿ. ಆ ವಿಧಿಲಿಖಿತವನ್ನು ಹೇಗೆ ಅಳಿಸಿ ಹಾಕಬೇಕು ಎನ್ನುವ ವಿಷಯವನ್ನೂ ಸಹ ನೀವು ಸಾಧನೆ ಮಾಡುವ ಮೂಲಕ ಕಲಿತುಕೊಳ್ಳಬೇಕು. ಏಕೆಂದರೆ ವಿಧಿಲಿಖಿತದ ಪ್ರಭಾವವೇ ಅಧಿಕವಾಗಿರುತ್ತದೆ, ಆದುದರಿಂದ ನೀವು ಅಂದುಕೊಂಡದ್ದು ಸಾಧಿಸಲು ಸಾಧ್ಯವಾಗುವುದಿಲ್ಲ. ಹಾಗೆಯೇ ತಾನೊಂದು ಬಗೆದರೆ ದೈವವೊಂದು ಬಗೆಯುತ್ತಾನೆ ಎಂದು ಹೇಳುತ್ತಾರೆ. ಆದುದರಿಂದ ನೀವು ಬಯಸಿದ್ದನ್ನು ನಿಮ್ಮ ದೈವವೂ ಸಹ ಒಪ್ಪಿಕೊಂಡರೆ ಮಾತ್ರ ನೀವು ಅಂದುಕೊಂಡದ್ದು ಸಂಭವವಾಗುತ್ತದೆ. ಆದ್ದರಿಂದ ನಿಮ್ಮಲ್ಲೂ ಸಹ ಅನೇಕ ಅಡಚಣೆಗಳಿವೆ ಎನ್ನುವ ವಿಷಯವನ್ನು ಗ್ರಹಿಸಿರಿ.

ಈ ರೀತಿ ಜಯವೆನ್ನುವುದು ಅನೇಕ ವಿಷಯಗಳ ಮೇಲೆ ಆಧಾರಪಟ್ಟಿರುತ್ತದೆ. ಆದುದರಿಂದ ನಿಮ್ಮ ಸಾಮರ್ಥ್ಯಕ್ಕೆ ಮತ್ತು ನೈಪುಣ್ಯತೆಗೆ, ಜಯವನ್ನು ಪ್ರಮಾಣವನ್ನಾಗಿ ಪರಿಗಣಿಸದೇ, ಆನಂದವನ್ನು ಪ್ರಮಾಣವನ್ನಾಗಿ ಪರಿಗಣಿಸಿರಿ. ನನ್ನ ಪ್ರತಿಭೆಯನ್ನು ನೋಡಿದೆಯಾ, ನಾನು ಸಮಸ್ಯೆಯಲ್ಲಿ ಇದ್ದಾಗಲೂ ಸಹ ಆನಂದದಿಂದ ಇದ್ದೇನೆಂದು ಗರ್ವದಿಂದ ನಿಮಗೆ ನೀವೇ ಹೇಳಿಕೊಳ್ಳಿರಿ.

ಉದಾಹರಣೆಗೆ, ನೀವು ಅಂದುಕೊಂಡದ್ದು ಸಾಧಿಸಿದಾಗ ಜಯಗಳಿಸಿದೆ ಎಂದುಕೊಳ್ಳುತ್ತೀರಿ. ನೀವು ವ್ಯಾಪಾರವನ್ನು ಮಾಡುತ್ತಿರುವಿರಿ ಎಂದುಕೊಳ್ಳಿ. ಆಗ ನೀವು ಪ್ರತಿ ದಿನ ಕನಿಷ್ಠ 5000 ರೂಪಾಯಿಗಳನ್ನು ಸಂಪಾದಿಸಬೇಕೆಂದುಕೊಳ್ಳುತ್ತೀರಿ. ನೀವು ಅಂದುಕೊಂಡದ್ದಕ್ಕಿಂತ ಕಡಿಮೆ ಸಂಪಾದಿಸಿದರೆ ದುಃಖಕ್ಕೆ ಒಳಗಾಗುತ್ತೀರಿ. ಅದೇ ರೀತಿ ಅಂದುಕೊಂಡದ್ದಕ್ಕಿಂತ ಹೆಚ್ಚು ಸಂಪಾದಿಸಿದರೂ ಸಹ. ಸ್ವಲ್ಪ ಸಮಯದವರೆಗೆ ಮಾತ್ರ ಸಂತೋಷವಾಗಿದ್ದರೂ ಆನಂತರ ಪುನಃ ಒತ್ತಡಕ್ಕೆ ಒಳಗಾಗುತ್ತೀರಿ. ಏಕೆಂದರೆ ನಾಳೆ ಇದೇ ರೀತಿ ಸಂಪಾದಿಸಲು ಸಾಧ್ಯವಾಗುತ್ತದೋ ಇಲ್ಲವೋ ಎನ್ನುವ ಸಂದಿಗ್ದತೆಯಲ್ಲಿ ನೀವು ಇರುತ್ತೀರಿ.

ಹೀಗೆ ಜೀವನಕ್ಕೆ ಸಂಬಂಧಿಸಿದ ಎಲ್ಲಾ ಕ್ಷೇತ್ರಗಳಲ್ಲಿ ನೀವು ಎಷ್ಟೋ ಸಾಧಿಸಬೇಕೆಂದು ಅಂದುಕೊಳ್ಳುತ್ತೀರಿ, ಅವೆಲ್ಲವೂ ನೆರವೇರಬೇಕೆಂದು ಬಯಸುತ್ತೀರಿ. ಆದರೆ ಇಲ್ಲಿಯವರೆಗೆ ಯಾರಿಗೂ ಸಹ ತಾವು ಅಂದುಕೊಂಡಿದ್ದೆಲ್ಲಾ ಸಂಭವಿಸಿಲ್ಲ. ಆದುದರಿಂದ ಜಯ ಅಪಜಯಗಳು, ಕಷ್ಟ ಸುಖಗಳು ಎಲ್ಲರ ಜೀವನದಲ್ಲೂ ಇರುತ್ತವೆನ್ನುವ ವಾಸ್ತವವನ್ನು ಒಪ್ಪಿಕೊಳ್ಳಿರಿ. ತುಂಬಾ ಜನರು ಕಷ್ಟ ಬಂದಾಗ ಕುಗ್ಗುತ್ತಾರೆ, ಸುಖ ಬಂದಾಗ ಹಿಗ್ಗುತ್ತಾರೆ. ಆದರೆ ಸದಾ

ಆನಂದದಿಂದ ಇರಬೇಕೆಂದರೆ ಅದಕ್ಕೆ ಪರಿಷ್ಕಾರವು ಕಷ್ಟ ಸುಖಗಳು, ಜಯ ಅಪಜಯಗಳು, ಲಾಭ ನಷ್ಟಗಳು ಏನೇ ಸಂಭವಿಸಿದರೂ ಎಲ್ಲಾ ಸಮಯದಲ್ಲೂ ಆನಂದದಿಂದ ಇರುವುದು.

ಆದುದರಿಂದ ಪ್ರಾಪಂಚಿಕ ಪರವಾದ ದೃಷ್ಟಿಕೋನದಿಂದ ಹೇಳಬೇಕೆಂದರೆ, ಅಂತರ್ ಮಾರ್ಗದರ್ಶಕತ್ವದಲ್ಲಿ ಇದ್ದರೆ ನೀವು ಯಾವಾಗಲೂ ಜಯವನ್ನು ಹೊಂದುವುದಿಲ್ಲವೆಂದು, ಆದರೆ ಆಧ್ಯಾತ್ಮಿಕತೆಯ ದೃಷ್ಟಿಕೋನದಿಂದ ಹೇಳುವುದಾದರೆ ನೀವು ಯಾವಾಗಲೂ ಜಯವನ್ನೇ ಸಾಧಿಸುತ್ತೀರೆಂದು. ಆಧ್ಯಾತ್ಮಿಕತೆಯಲ್ಲಿ ಆನಂದವೇ ಜಯಕ್ಕೆ ಪ್ರಮಾಣವಾಗಿರುತ್ತದೆ. ನಿಮಗೆ ಬಾಹ್ಯದಲ್ಲಿ ಸಮಸ್ಯೆಗಳು ಇವೆಯೋ ಇಲ್ಲವೋ, ಜಯವನ್ನು ಸಾಧಿಸಿದ್ದೀರೋ ಅಥವಾ ಅಪಜಯವನ್ನು ಸಾಧಿಸಿದ್ದೀರೋ ಎನ್ನುವ ವಿಷಯ ಮುಖ್ಯವಲ್ಲ, ನೀವು ಎಲ್ಲಾ ಸಂದರ್ಭಗಳಲ್ಲೂ ಆನಂದದಿಂದ ಇರಬೇಕೆನ್ನುವುದೇ ಮುಖ್ಯ.

ಪ್ರಪಂಚವು ನಿಮ್ಮನ್ನು ಅಪಜಯಕ್ಕೆ ಪ್ರತಿನಿಧಿಯನ್ನಾಗಿ ಮಾಡಿದರೂ ಅಥವಾ ಪ್ರಪಂಚವು ನಿಮ್ಮನ್ನು ಹೀರೋ ವನ್ನಾಗಿ ಮಾಡಿ ಜಯದ ಪ್ರತಿನಿಧಿಯನ್ನಾಗಿ ಮಾಡಿದರೂ, ನಿಮಗೆ ಯಾವುದೇ ರೀತಿಯ ವ್ಯತ್ಯಾಸ ಇರುವುದಿಲ್ಲ. ಏನೇ ಸಂಭವಿಸಿದರೂ ನೀವು ಯಾವಾಗಲೂ ಆನಂದದಿಂದ ಇರುತ್ತೀರಿ. ಆದುದರಿಂದ ನನ್ನ ದೃಷ್ಟಿಯಲ್ಲಿ ಆನಂದವೇ ಜಯ. ನೀವು ಆನಂದವೇ ಜಯವೆಂದು ಅರ್ಥಮಾಡಿಕೊಂಡಿದ್ದೇಯಾದರೆ, ಆಗ ನಾನು ಹೇಳುತ್ತೇನೆ- ಅಂತರ್ ಮಾರ್ಗದರ್ಶಕತ್ವದಲ್ಲಿ ನೀವು ಯಾವಾಗಲೂ ಜಯವನ್ನು ಸಾಧಿಸುತ್ತೀರೆಂದು.

ಆದರೆ ನೀವು "ನಾನು ಆರೋಗ್ಯವಾಗಿ ಇದ್ದರೆ ಮಾತ್ರ ಆನಂದದಿಂದ ಇರುತ್ತೇನೆ, ನೀನಿಲ್ಲದಿದ್ದರೆ ನಾನು ಇರಲಾರೆನು, ಜಯವನ್ನು ಸಾಧಿಸಿದರೆ ಮಾತ್ರ ನನಗೆ ಬೆಲೆ ಇರುತ್ತದೆ, ನನಗೆ ಉದ್ಯೋಗ ಸಿಕ್ಕ ನಂತರವೇ ನಾನು ಆನಂದವಾಗಿ ಇರುತ್ತೇನೆ" ಎನ್ನುವ ದೃಷ್ಟಿಕೋನದಿಂದ ಜೀವಿಸಿದರೆ, ನೀವು ಎಷ್ಟೇ ಸಾಧಿಸಿದರೂ ಖಂಡಿತವಾಗಿ ನೀವು ಬಲಹೀನರಾಗುತ್ತೀರಿ, ಖಂಡಿತವಾಗಿ ಬಾಹ್ಯ ವಿಷಯಗಳೇ ನಿಮ್ಮನ್ನು ಡಾಮಿನೇಟ್ ಮಾಡುತ್ತವೆ. ಅಂದರೆ ಇಲ್ಲಿ ನಿಮಗೆ ಮಾನಸಿಕ ನಿಷ್ಕ್ರಿಯತೆ ಇದ್ದಂತೆ, ಏಕೆಂದರೆ ನಿಮ್ಮ ಆನಂದವು ನಿಮ್ಮ ಮೇಲಲ್ಲದೇ 100% ಕೇವಲ ಬಾಹ್ಯದಲ್ಲಿರುವ ಪ್ರತಿಭೆಯ ಮೇಲೆ ಹಾಗೂ ಇತರರ ಮೇಲೆಯೇ ಆಧಾರಪಟ್ಟಿರುವುದರಿಂದ.

ಹಾಗಿದ್ದರೂ ತುಂಬಾ ಜನರಿಗೆ ಆನಂದವೆನ್ನುವುದು ಜಯವಲ್ಲ, ಅವರಿಗೆ ಜಯವೆಂದರೆ ಮತ್ತಿನ್ನೇನೋ. ಅದು ದುಃಖವೂ ಸಹ ಆಗಬಹುದು. ನಿಮಗೆ ದುಃಖವನ್ನು ಉಂಟು ಮಾಡುತ್ತದೆ ಎಂದು ತಿಳಿದರೂ ನೀವು ಜಯಕ್ಕೋಸ್ಕರ ತಪಿಸುತ್ತಿರುತ್ತೀರಿ. ಪ್ರಾಪಂಚಿಕವಾಗಿ ಜಯವನ್ನು ಸಾಧಿಸಿದವರು ಸಹ ನನಗೆ ದುಃಖದಿಂದ ತುಂಬಿರುವಂತೆಯೇ ಕಾಣುತ್ತಿದ್ದಾರೆ, ಏಕೆಂದರೆ ಆ ಜಯದಿಂದಾಗಿ ಅವರಿಗೆ ಅನೇಕ ಹೊಸ ಸಮಸ್ಯೆಗಳು ಉದ್ಭವವಾಗುತ್ತಿವೆಯಾದ್ದರಿಂದ. ಇಂಥಹವರು ನನ್ನ ಬಳಿ ಬಂದು, ನನ್ನ ಸಲಹೆಗಳನ್ನು ತೆಗೆದುಕೊಳ್ಳುತ್ತಾ ಇರುತ್ತಾರೆ. ಇನ್ನೂ ಪ್ರಾಪಂಚಿಕವಾಗಿ ಅಪಜಯಗಳನ್ನು ಹೊಂದುತ್ತಿರುವವರ ಬಗ್ಗೆ ಹೇಳುವ ಅವಶ್ಯಕತೆಯೇ ಇಲ್ಲ.

ಹಾಗೆಯೇ ಶ್ರೀಮಂತರೂ ಸಹ ದುಃಖದಲ್ಲಿ ಇದ್ದಾರೆಂದು ತಿಳಿದರೂ ಸಹ, ತುಂಬಾ ಜನರು ಪ್ರಸ್ತುತ ಸ್ಥಿತಿಯಲ್ಲಿ ಸಂತೃಪ್ತಿ ಹೊಂದದೇ ಸಿರಿತನವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಬೇಕೆಂದು ನೋಡುತ್ತಾರೆ ಎಷ್ಟೇ ದುಃಖ ಉಂಟಾದರೂ ಪರವಾಗಿಲ್ಲ, ಅವರಿಗೆ ಜಯವನ್ನು ಸಾಧಿಸುವುದೇ ಮುಖ್ಯ. ಆದುದರಿಂದ ಪ್ರಾಪಂಚಿಕದಲ್ಲಿ ಇರುವವರಿಗೆ ಜಯ ಎಂದರೆ ಏನು? ಇವರಿಗೆ ಜಯ ಎಂದರೆ ಅಹಂ ನ್ನು ತೃಪ್ತಿಪಡಿಸಿಕೊಳ್ಳುವುದೇ ಹೊರತು ಆನಂದವನ್ನು

ಹೊಂದುವುದಲ್ಲ. ಕೇವಲ ಜಯವನ್ನು ಸಾಧಿಸಿದ್ದೇವೆಂದು ಜನರಿಂದ ಹೊಗಳಿಸಿಕೊಳ್ಳುವುದಕ್ಕಾಗಿಯೇ ಇವರು ತೀವ್ರವಾಗಿ ಬಯಸುತ್ತಿರುತ್ತಾರೆ.

ನೀವು ಜಯವನ್ನು ಸಾಧಿಸುವುದಕ್ಕಾಗಿ ಎಲ್ಲವನ್ನೂ ಕಳೆದುಕೊಂಡಿರಬಹುದು - ನಿಮ್ಮ ಆತ್ಮವನ್ನು, ನಿಮಗೆ ಆನಂದವನ್ನು ನೀಡುವ ಅಮಾಯಕತ್ವವನ್ನು, ಪ್ರಶಾಂತತೆಯನ್ನು, ನಿಶ್ಶಬ್ದವನ್ನು, ಹೀಗೆ ನಿಮ್ಮ ದೈವದ ಹತ್ತಿರ ತಲುಪಿಸುವ ಎಲ್ಲವನ್ನೂ ಕಳೆದುಕೊಂಡಿರಬಹುದು, ಆದರೆ ಸಮಾಜ ಹೇಳುತ್ತದೆ ನೀವು ಜಯವನ್ನು ಸಾಧಿಸಿದ್ದೀರೆಂದು. ಪ್ರಪಂಚಕ್ಕೆ ಅಹಂಕಾರವನ್ನು ತೃಪ್ತಿಪಡಿಸಿಕೊಳ್ಳುವುದೇ ಜಯ ಎಂದರೆ. ಆದರೆ ನನ್ನ ದೃಷ್ಟಿಯಲ್ಲಿ ಜಯ ಎಂದರೆ  ಆನಂದದಿಂದ ಇರುವುದು. ನನ್ನ ಬಗ್ಗೆ ಯಾರಿಗಾದರೂ ಗೊತ್ತಿದೆಯೋ ಇಲ್ಲವೋ ಎನ್ನುವುದು ಮುಖ್ಯವಲ್ಲ. ನಾನು ಹೇಗೇ ಇದ್ದರೂ ಆನಂದದಿಂದ ಇದ್ದರೆ, ಅದೇ ನನ್ನ ದೃಷ್ಟಿಯಲ್ಲಿ ಎಲ್ಲಕ್ಕಿಂತ ಉನ್ನತವಾದ ಜಯ.

ಆದುದರಿಂದ ಈ ವ್ಯತ್ಯಾಸವನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ, ಏಕೆಂದರೆ ಪ್ರಪಂಚದಲ್ಲಿ ಕೇವಲ ಜಯವನ್ನು ಸಾಧಿಸುವುದಕ್ಕಾಗಿ, ತುಂಬಾ ಜನರು ಅಂತರ್ ಮಾರ್ಗದರ್ಶಕತ್ವವನ್ನು ಕಂಡುಕೊಂಡು ಅದರಲ್ಲೇ ಇರಬೇಕೆಂದುಕೊಳ್ಳುತ್ತಾರೆ. ಆದರೆ ಅಂಥಹವರಿಗೆ ಅಂತರ್ ಮಾರ್ಗದರ್ಶಕತ್ವ ಎನ್ನುವುದು ನಿರಾಶೆಯನ್ನು, ನಿರುತ್ಸಾಹವನ್ನು, ಆಶಾಭಂಗವನ್ನು ಉಂಟುಮಾಡುತ್ತದೆ. ನಿಜ ಎಂದರೆ, ಮೊದಲು ಅವರು ಅಂತರ್ ಮಾರ್ಗದರ್ಶಕತ್ವವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ, ಒಂದು ವೇಳೆ ಅವರು ಕಂಡುಕೊಂಡರೂ, ಅವರು ದುಃಖದಲ್ಲೇ ಇರುತ್ತಾರೆ. ಏಕೆಂದರೆ ಅವರ ಗುರಿ ಪ್ರಪಂಚದಲ್ಲಿ ತಮ್ಮ ಪ್ರಸಿದ್ಧಿ. ಅಹಂ ತೃಪ್ತಿಯೇ ಹೊರತು ಆನಂದವಲ್ಲ.

ಇಲ್ಲಿ ಅಂತರ್ ಮಾರ್ಗದರ್ಶಕತ್ವದ ಮೂಲಕ ನೀವು ಪ್ರಾಪಂಚಿಕವಾಗಿ ಜಯವನ್ನು ಸಾಧಿಸಿಲ್ಲವೆಂದು ನಾನು ಹೇಳುತ್ತಿಲ್ಲ. ಅದೇ ರೀತಿ ಜಯಕ್ಕೆ ಬೆಲೆ ಇಲ್ಲವೆಂದು ಅದನ್ನು ನಿರಾಕರಿಸಬೇಕೆಂದು ಸಹ ಹೇಳುತ್ತಿಲ್ಲ. ಅದಕ್ಕೆ ಇರಬೇಕಾದ ಸ್ಥಾನಮಾನ ಅದಕ್ಕೆ ಇದೆ. ಆದರೆ ಅದೊಂದೇ ಸರಿಹೋಗದು ಎಂದು ಹೇಳುತ್ತಿದ್ದೇನೆ. ಇಲ್ಲಿ ನಾನು ಕೇವಲ ಆನಂದದಿಂದ ಕೂಡಿದ ಜಯವನ್ನು ಸಾಧಿಸುತ್ತೀರೆಂದು ಹೇಳುತ್ತಿದ್ದೇನೆ. ಹಾಗೆಯೇ ನಿಮ್ಮ ದೈವದ ಸಹಕಾರ ಲಭಿಸಿದಾಗಲೇ ಜಯವನ್ನು ಸಾಧಿಸುತ್ತೀರೆಂದು ಹೇಳುತ್ತಿದ್ದೇನೆ. ಅಂದರೆ ಜಯ ಆಧಾರಿತ ಚೈತನ್ಯದಿಂದ ಆನಂದ ಆಧಾರಿತ ಚೈತನ್ಯದ ಕಡೆಗೆ ನಿಮ್ಮನ್ನು ಕರೆದೊಯ್ಯಬೇಕೆನ್ನುವುದೇ ನನ್ನ ಉದ್ದೇಶ. ಜಯ ಅಪಜಯಗಳೆನ್ನುವವು ಕತ್ತಲು ಬೆಳಕಿನಂಥಹವು. ಅವು ಬಂದು-ಹೋಗುತ್ತಲೇ ಇರುತ್ತವೆ. ಅಪಜಯವನ್ನು ಅರ್ಥಮಾಡಿಕೊಂಡು ಅದಕ್ಕನುಗುಣವಾಗಿ ನಿಮ್ಮಲ್ಲಿ ಬದಲಾವಣೆ ಮಾಡಿಕೊಂಡು, ಆನಂದ ಆಧಾರಿತ ಚೈತನ್ಯದಲ್ಲಿ ಪ್ರವೇಶಿಸಿದ ತಕ್ಷಣ ನಿಮ್ಮ ಅರ್ಹತೆಗೆ ತಕ್ಕ ಫಲಿತಾಂಶ ನಿಮಗೆ ಲಭಿಸುತ್ತದೆ.

ಆದುದರಿಂದ ಆತ್ಮದೊಂದಿಗೆ ಇದ್ದರೆ ನೀವು ಅಂತರ್ ಪ್ರಪಂಚದಲ್ಲಿ ಯಾವಾಗಲೂ ಜಯವನ್ನು ಸಾಧಿಸುತ್ತೀರಿ. ಅಶಾಶ್ವತವಾದವೊಂದಿಗೆ ಅಥವಾ ಪ್ರಾಪಂಚಿಕದಲ್ಲೇ ಇರಬೇಕೆಂದುಕೊಂಡರೆ, ಬುದ್ಧಿವಂತರನ್ನು, ಸ್ಪರ್ಧಾತ್ಮಕರನ್ನು, ಅಸೂಯೆಪರರನ್ನು, ಅನ್ಯಾಯದಿಂದ ವ್ಯವಹರಿಸುವವರನ್ನು ಅನುಸರಿಸಿರಿ. ಆಗ ನೀವು ಈ ಇಡೀ ಪ್ರಪಂಚವನ್ನು ಗೆಲ್ಲಬಹುದು, ಆದರೆ ನಿಮ್ಮನ್ನು ನೀವು, ನಿಮ್ಮೊಳಗಿನ ಶಾಶ್ವತವಾದ ದೈವವನ್ನು ಕಳೆದುಕೊಳ್ಳುತ್ತೀರಿ. ಆದುದರಿಂದ ನೀವು ಕೇವಲ ಈ ಪ್ರಪಂಚದಲ್ಲೇ ಏನನ್ನಾದರೂ ಸಾಧಿಸಬೇಕೆಂದುಕೊಂಡರೆ, ಅಂತರ್ ಮಾರ್ಗದರ್ಶಕತ್ವನ ಮಾತನ್ನು ಕೇಳಬೇಡಿ.

ಆದ್ದರಿಂದ ಮನಸ್ಸಿನಲ್ಲಿ ಸ್ಪಷ್ಟತೆಯನ್ನು ತಂದುಕೊಳ್ಳಿ. ಜಯ ಆಧಾರಿತ ಚೈತನ್ಯದಲ್ಲಿ ಇರಬೇಡಿ. ಈ ಪ್ರಪಂಚದಲ್ಲಿ ಜಯ ಎನ್ನುವುದು ಅತಿ ದೊಡ್ಡ ಅಪಜಯ. ಆದುದರಿಂದ ಜಯ ಸಾಧಿಸಬೇಕೆಂದು ಪ್ರಯತ್ನಿಸಬೇಡಿ

ಇಲ್ಲದಿದ್ದರೆ ನೀವೇ ಅಪಜಯ ಹೊಂದುತ್ತೀರಿ. ಬಾಹ್ಯದ ಪ್ರತಿಭೆಯ ಮೇಲೆ ಆಧಾರಪಡದ ಆನಂದದಲ್ಲಿ ಯಾವಾಗಲೂ ಇರಬೇಕೆಂದರೆ ಏನು ಮಾಡಬೇಕೆನ್ನುವುದರ ಬಗ್ಗೆ ಆಲೋಚಿಸಿ. ಆನಂತರವೇ ನಿಮ್ಮ ಜೀವನದಲ್ಲಿ ಅದ್ಭುತಗಳು ಸಂಭವಿಸುತ್ತವೆ.

**ಕಾಣಿಕೆಗಳು-Donations**

ಈ ನ್ಯೂ ಎನರ್ಜಿ ಕಾನ್ಸೆಪ್ಟ್ ನ್ನು ಆಚರಿಸಿ ಲಾಭ ಪಡೆದವರು ಅಥವಾ ಮತ್ತಾರಾದರೂ ಕಾಣಿಕೆಗಳನ್ನು ನೀಡಬಯಸುವವರು ಈ ಕೆಳಗೆ ತಿಳಿಸಿರುವ ಬ್ಯಾಂಕ್ ಖಾತೆಗೆ ಹಣವನ್ನು ಪಾವತಿಸಬಹುದು. ನಿಮ್ಮ ಸಹಾಯದಿಂದ ನ್ಯೂ ಎನರ್ಜಿ ಜ್ಞಾನವನ್ನು ಅತ್ಯಧಿಕ ಜನರಿಗೆ ತಲುಪಿಸಲು ನಮಗೆ ಪ್ರೋತ್ಸಾಹವನ್ನುಂಟು ಮಾಡುತ್ತದೆ.

A/C DETAILS: P.SREEDHAR, STATE BANK OF INDIA, HANUMAKONDA BRANCH, IFSC CODE: SBIN0003422, A/C No: 30603897922. MOBILE No: 9390151912 - THIS NUMBER ALSO HAS GooglePay AND PhonePe.

** ಇದನ್ನು ತೆಲುಗು ಭಾಷೆಯಿಂದ ಅನುವಾದಿಸಲ್ಪಟ್ಟಿದೆ. ತೆಲುಗು ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು.

http://darmam.com/downloads/telugutopics/12.vijayam-apajayam.pdf

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ಕನ್ನಡದಲ್ಲಿ ಕೇಳಬೇಕೆಂದು (To Listen) ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಕೇಳಬಹುದು (Listen).

https://www.youtube.com/playlist?list=PL7sfndcUtXfluvXK-CsihXrxGyyljh8n6

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ತೆಲುಗು, ಇಂಗ್ಲೀಷ್, ಕನ್ನಡ, ಹಿಂದಿ ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/library.html

**ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ.

http://darmam.com/important-topics.html